ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಃದಃನ್ಯಾಃದಂ.,ರವರು, ಕಡೂರು

C.C. No.3745/2023.

ದಿನಾಂಕಃ**12.12.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲುಃ- ಆರೋಪಿತರ ಪರ ಶ್ರೀ ಕೆ ವಿ ಎಂ ವಕೀಲರಿಂದಃ-

ನಾನು ಗಲಾಟೆಯಾದ ದಿನವೇ ದೂರು ದಾಖಲು ಮಾಡಿರುತ್ತೇನೆ. ದೂರನ್ನು ನಾನು ಹೇಳಿದಂತೆ ಬರೆದಿರುತ್ತಾರೆ, ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 1 ನ್ನು ದೂರನ್ನು ಪೊಲೀಸ್ ಠಾಣೆಯಲ್ಲಿ ಕೈಯಲ್ಲಿ ಬರೆಸಿ ನೀಡಿರುತ್ತೇನೆ. ಸದರಿ ಬುಲೆಟ್ ಬೈಕ್ ಅನ್ನು ನನ್ನ ಮಾವನವರೇ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಬೈಕ್ ನನ್ನ ಅಣ್ಣನ ಬಳಿ ಇಲ್ಲ. ಸದರಿ ಬುಲೆಟ್ ಬೈಕ್ ಅನ್ನು ನನ್ನ ಮಾವನವರು ಅವರ ಸ್ವಂತ ಆದಾಯದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿ ನನಗೆ ಹಲ್ಲೆ ಮಾಡಿದ್ದರಿಂದ ನಾನು ಕಡೂರಿನ ಸ.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಾಬ್ತು ಗಾಯದ ಪ್ರಮಾಣ ಪತ್ರ ಪಡೆದಿರುತ್ತೇನೆ, ಆದರೆ ಅದನ್ನು ಎಲ್ಲಿ ಇಟ್ಟಿರುತ್ತೇನೆ ಎಂದು ನೆನಪಿಲ್ಲ. ಸೀಮೆಎಣ್ಣೆ ಹಾಕಿ ಸುಡುತ್ತೇನೆ ಎಂದು ಬೇದರಿಕೆ ಹಾಕಿರುತ್ತಾರೆ ಎಂದು ಹೇಳಿದ್ದು, ಪ್ರಸ್ತುತ ಸೀಮೆಎಣ್ಣೆ ಎಲ್ಲಿ ದೊರೆಯುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಮದುವೆಯಾದ ನಂತರ ನನ್ನ ತವರು ಮನೆಗೆ ಹೋಗಿರುತ್ತೇನೆ. ನಾನು 2 ನೇ ಬಾರಿಗೆ ಗರ್ಬಿಣಿಯಾಗಿದ್ದೆ ಎಂದು ಹೇಳಿದ್ದು, ಆ ಬಗ್ಗೆ ಚಿಕಿತ್ಸೆ ಪಡೆದ ದಾಖಲೆಗಳನ್ನು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಮತ್ತೊಮ್ಮೆ ಗರ್ಭ ಧರಿಸಿದ್ದಾಗ ಆರೋಪಿಯು ಮಾತ್ರೆ ತಿನ್ನಿಸಿ ಗರ್ಭಪಾತ ಮಾಡಿಸಿರುತ್ತಾರೆ. ನಾನು 3 ನೇ ಬಾರಿ ತೋರಿಸಿದ ವೈದ್ಯರ ಹೆಸರು ಜಗದೀಶ್. ನಾನು ಚಿಕಿತ್ಸೆ ಪಡೆದ ದಾಖಲೆಗಳನ್ನು ಪೊಲೀಸರಿಗೆ ನೀಡಿರುತ್ತೇನೆ.

ಆರೋಪಿತರೆ ಅವರ ಸ್ವಂತ ಖರ್ಚಿನಿಂದ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಮದುವೆಗೆಂದು ಅವರ ಜಮೀನನ್ನು ಆಧಾರ ಮಾಡಿ ಸಾಲ ತೆಗೆದುಕೊಂಡು ಮದುವೆ ಮಾಡಿ, ಅದರ ಕರಾರು ಪತ್ರವು ಸಹಃ ಇರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಅವರ ತಂದೆ-ತಾಯಿ ಜೊತೆ ಚೆನ್ನಾಗಿ ಇದ್ದದ್ದನ್ನು ನಾನು ಸಹಿಸಲಾದರೆ 1 ನೇ ಆರೋಪಿಯನ್ನು ನಾನು ಬೇರೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮದುವೆಗೆ ಆರೋಪಿತರೇ ಚಿನ್ನಾಭರಣ ತಂದುಹಾಕಿರುತ್ತಾರೆ ಎಂದರೆ ಸರಿಯಲ್ಲ.

ಯಾವ ಪೊಲೀಸರು ಬಂದು ಮಹಜರ್ ಬರೆದರು ಎಂದು ಪೊಲೀಸ್ ಸಿಬ್ಬಂದಿಯ ಹೆಸರು ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿದೆ. ಮಹಜರ್ ಅನ್ನು ನಾನು ಓದಿರುವುದಿಲ್ಲ, ಪೊಲೀಸರು ಓದಿ ಹೇಳಿದ್ದರು, ಆದರೆ ನನಗೆ ಈಗ ಮರೆತುಹೋಗಿದೆ. ಆರೋಪಿತರ ಯಾವುದೇ ತಪ್ಪು ಇಲ್ಲದಿದ್ದರು ಸಹಃ ನಾವು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,
ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.